Phone: 91- 080-23330984/149
Telefax: 91- 080-23330984

NAAC A+ Accredited

Website: www.uasbangalore.edu.in
Email: registrar@uasbangalore.edu.in

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕುಲಸಚಿವರ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು

UNIVERSITY OF AGRICULTURAL SCIENCES, BANGALORE

Office of the Registrar, GKVK, Bengaluru-560065

ಸಂಖ್ಯೆ: ಕುಸ/ಸಕುಸ/ಮು.ಕೌ.-ಐಸಿಎಆರ್/2026-27 ದಿನಾಂಕ: 09.11.2026

ಅಧಿಸೂಚನೆ

ವಿಷಯ: ರಾಜ್ಯದ ಕೃಷಿ ಸಂಬಂಧಿತ ಕೃವಿವಿ, ಬೆಂಗಳೂರು ಮತ್ತು ಮಂಡ್ಯ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಐಸಿಎಆರ್ ಕೋಟಾದಡಿ 2026-27, (CUET/ICAR, New Delhi) ನೇ ಸಾಲಿನಲ್ಲಿ ಭರ್ತಿಯಾಗದೇ ಉಳಿದಿರುವ ಸೀಟುಗಳಿಗೆ ಅರ್ಜಿ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ-

ಉಲ್ಲೇಖ: 1. ಸಂಖ್ಯೆ: ಕುಸ/ಸಕುಸ/ಮು.ಕೌ.-ಐಸಿಎಆರ್/2026-27 ದಿನಾಂಕ: 31.10.2026
2.ಶಿಕ್ಷಣ ನಿರ್ದೇಶಕರು ಮತ್ತು ಮಾನ್ಯ ಕುಲಪತಿಗಳು, ಕೃವಿವಿ, ಬೆಂಗಳೂರು ಇವರ ಅನುಮೋದನೆ ದಿನಾಂಕ: 09.11.2026

****

ಶೈಕ್ಷಣಿಕ ವರ್ಷ 2026-27ನೇ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಮಂಡ್ಯದ ವಿವಿಧ ಸ್ನಾತಕ ಪದವಿಗಳಿಗೆ ಐ.ಸಿ.ಎ.ಆರ್ (CUET/ICAR-2026) ಅಡಿಯಲ್ಲಿ ನಡೆಸಿದ ಅಂತಿಮ ಸುತ್ತಿನ ಪ್ರವೇಶಾತಿ ಪ್ರಕ್ರಿಯೆಯ ನಂತರವೂ ಭರ್ತಿಯಾಗದೆ ಉಳಿದಿರುವ ಪ್ರವರ್ಗವಾರು ಸೀಟುಗಳನ್ನು ದಿನಾಂಕ **16.11.2026** ರಂದು ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆ ಮೂಲಕ ಭರ್ತಿ ಮಾಡಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು (ಉಲ್ಲೇಖ-1).

ಮುಂದುವರೆದು, ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕವನ್ನು 13.11.2026 ರವರೆಗೆ ವಿಸ್ತರಿಸಿ ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯನ್ನು ದಿನಾಂಕ 19.11.2026 ರಂದು ನಡೆಸಲು ತೀರ್ಮಾನಿಸಲಾಗಿದೆ. ಆದಾಗ್ಯೂ, ದಿನಾಂಕ 31.10.2026ರ ಹಿಂದಿನ ಅಧಿಸೂಚನೆ ಸಂಖ್ಯೆ: ಕುಸ/ಸಕುಸ/ಮು.ಕೌ.-ಐಸಿಎಆರ್/2026-27 ರಲ್ಲಿ ನಿರ್ದಿಷ್ಟಪಡಿಸಿದ ಇತರೆ ಎಲ್ಲಾ ವಿವರಗಳು ಮತ್ತು ನಿಬಂಧನೆಗಳು ಬದಲಾಗುವುದಿಲ್ಲ.

ವಿಶ್ವವಿದ್ಯಾನಿಲಯಗಳ ಅಧಿಕೃತ ಜಾಲತಾಣಗಳಲ್ಲಿ www.uasbangalore.edu.in www.uasmandya.co.in ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ ಸೂಕ್ತ ಶೈಕ್ಷಣಿಕ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಅರ್ಜಿಯ ಜೊತೆಗೆ **"The Comptroller, UAS, Bangalore"** ಇವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ (DD) ಅನ್ನು ಪಡೆದು, ಖುದ್ದಾಗಿ ಕುಲಸಚಿವರ ಕಛೇರಿ, ನಾಯಕ್ ಭವನ, 1ನೇ ಮಹಡಿ, ಜಿಕೆವಿಕೆ, ಬೆಂಗಳೂರು ಇಲ್ಲಗೆ ದಿನಾಂಕ **13.11.2026** ರವರೆಗೆ ಸಲ್ಲಿಸತಕ್ಕದ್ದು.

ಅರ್ಜಿ ಶುಲ್ಕ: 1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ ರೂ. 250/-
2. ಇತರೆ ಅಭ್ಯರ್ಥಿಗಳಿಗೆ ರೂ. 500/-

ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ರ್‍ಯಾಂಕ್ ಪಟ್ಟಿಯನ್ನು ದಿನಾಂಕ 14.11.2026ರಂದು ಆಯಾ ವಿಶ್ವವಿದ್ಯಾನಿಲಯಗಳ ಜಾಲತಾಣಗಳಲ್ಲಿ ಪ್ರಕಟಿಸಲಾಗುವುದು.

ರಾಜ್ಯದ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಮಂಡ್ಯ ವಿಶ್ವವಿದ್ಯಾನಿಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯನ್ನು ಒಂದೇ ಸ್ಥಳದಲ್ಲಿ ಅಂದರೆ ನಾರ್ಥ್ ಬ್ಲಾಕ್ ಆಡಿಟೋರಿಯಮ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು (ಜಿ.ಕೆ.ವಿ.ಕೆ. ಆವರಣ) ಇಲ್ಲಿಯೇ ದಿನಾಂಕ **19.11.2026 ರಂದು ಬೆಳಗ್ಗೆ 10.00 ಗಂಟೆಯಿಂದ** ನಡೆಸಲಾಗುವುದು.

ಆಯ್ಕೆಯಾದ ಅಭ್ಯರ್ಥಿಗಳು ಆಯಾ ವಿಶ್ವವಿದ್ಯಾನಿಲಯ / ಕಾಲೇಜುಗಳಿಗೆ ದಿನಾಂಕ **20.11.2026**ರ ಸಾಯಂಕಾಲ 4.00 ಘಂಟೆಯೊಳಗೆ ಕಡ್ಡಾಯವಾಗಿ ವರದಿ ಮಾಡಿಕೊಂಡು ಪ್ರವೇಶಾತಿ ಪಡೆಯಬೇಕು.

ಆದೇಶದ ಮೇರೆಗೆ

ಕುಲಸಚಿವರು

ಕೃವಿವಿ, ಬೆಂಗಳೂರು
(ರಾಜ್ಯದ ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು ಮತ್ತು ಮಂಡ್ಯ ವಿಶ್ವವಿದ್ಯಾನಿಲಯಗಳ
ಪರವಾಗಿ)

ಪ್ರತಿಗಳು:

1. ಮಾನ್ಯ ಕುಲಪತಿಗಳು / ಶಿಕ್ಷಣ ನಿರ್ದೇಶಕರು / ಕುಲಸಚಿವರು, ಕೃವಿವಿ, ಬೆಂಗಳೂರು / ಮಂಡ್ಯ.